ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:2117/2019

ಚಾಸಾ:5 ಪ್ರಾಸಾ:5

ದಿನಾಂಕ: 23.10.2024

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಇಬ್ರಾಹಿಂ ಬಾತೀಷ್ |
| ತಂದೆಯ ಹೆಸರು | : | ಯೂಸೂಫ್ |
| ವಯಸ್ಸು | : | 34 ವರ್ಷ |
| ಉದ್ಯೋಗ | : | ಮೌಲಿದ್ |
| ವಾಸ ಸ್ಥಳ | : | ಉಳ್ಳಾಲ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

<u>**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**</u>

ಮೃತ ಮೊಹಮ್ಮದ್ ಸುಹೇಲ್ ನನಗೆ ಪರಿಚಯಸ್ಥರು. ಆತ ನನ್ನ ಶಿಕ್ಷಕರಾಗಿರುತ್ತಾರೆ. ದಿನಾಂಕ 20.04.2019 ರಂದು ನಾವು ದಾವಣಗೆರೆಯಿಂದ ನಾನು, ಚಾಸಾ.3, 4, ಮೃತ ಮೊಹಮ್ಮದ್ ಸಹೇಲ್ ಮತ್ತು ನಾನು ಉಡುಪಿಗೆ ಹೋಗುತ್ತಿದ್ದಾಗ ನ್ಯಾಯಾಲಯದ ಮುಂದಿರುವ ಆರೋಪಿ ಸದ್ರಿ ವಾಹನದ ಚಾಲಕನಾಗಿದ್ದು, ಅದು ಬುಲೆರೋ ವಾಹನವಾಗಿರುತ್ತದೆ. ನಾವು ತ್ರಾಸಿಯಲ್ಲಿ ಕುಂದಾಪುರದ ಕಡೆಗೆ ಬರುತ್ತಿದ್ದಾಗ ಎದುರುಗಡೆಯಿಂದ ಒಂದು ಲಾರಿ ಏಕಾಏಕಿ ಬಂದಿದ್ದು, ಅದನ್ನು ತಪ್ಪಿಸಲು ನಮ್ಮ ವಾಹನದ ಚಾಲಕ ವಾಹನವನ್ನು ತೀರಾ ಎಡಕ್ಕೆ ತಿರುಗಿಸಿದ್ದು, ನಮ್ಮ ಕಾರು ಪಲ್ಟಿಯಾಗಿರುತ್ತದೆ. ಅದೇ ಸಮಯಕ್ಕೆ ರಸ್ತೆಯಲ್ಲಿ ಹೋಗುತ್ತಿದ್ದ ಒಂದು ಬೈಕ್ ಗೆ ಡಿಕ್ಕಿಯಾಗಿರುತ್ತದೆ. ನಮ್ಮ ವಾಹನವನ್ನು ಅಪಘಾತದಿಂದ ತಪ್ಪಿಸಲು ನಮ್ಮ ಚಾಲಕ ತೀರಾ ಎಡಕ್ಕೆ ವಾಹನವನ್ನು ಚಲಾಯಿಸಿದ್ದರಿಂದ ಲಾರಿಗೆ ಡಿಕ್ಕಿಯಾಗುತ್ತಿದ್ದ ಅಪಘಾತವು ತಪ್ಪಿರುತ್ತದೆ. ಇಲ್ಲವಾದಲ್ಲಿ ಲಾರಿ ನಮ್ಮ ಗಾಡಿಗೆ ಡಿಕ್ಕಿಹೊಡೆಯುವ ಸಾಧ್ಯತೆ ಇತ್ತು. ಆದರೆ ನಮ್ಮ ಕಾರಿನಲ್ಲಿದ್ದ ಮೊಹಮ್ಮದ್ ಸುಹೇಲ್ ರವರು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ದ್ವಿಚಕ್ರ ವಾಹನದ ಸಹಸವಾರ ಭರತ್ ರವರು ಸಹ ಅಪಘಾತದಿಂದ ಮೃತಪಟ್ಟಿರುತ್ತಾರೆ. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಿಸಿಲ್ಲ ನಾನು ಯಾವುದೇ ಹೇಳಿಕೆಯನ್ನು ಪೊಲೀಸರಿಗೆ ನೀಡಿಲ್ಲ. ಸಾಕ್ಷಿಯು ನಿಪಿ.8 ನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ವಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ**

ಮೇಲೆ ಹೇಳಿದ ದಿನ ಆರೋಪಿಯು ಅತೀವೇಗ ಹಾಗೂ ಅಜಾಗರೂಕತೆಯಿಂದ ಕಾರನ್ನು ಚಲಾಯಿಸಿ ಎದುರುಗಡೆ ಇದ್ದ ದ್ವಿಚಕ್ರ ವಾಹನಕ್ಕೆ ಡಿಕ್ಕಿಹೊಡೆದ ಕಾರಣ ಅದು ಫ್ಲೈಓವರ್ ನ ಗೋಡೆ ಡಿಕ್ಕಿ ಹೊಡೆದು ಅದರ ಸಹಸವಾರನ ತಲೆ ಗೋಡೆಗೆ ಹೊಡೆದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ಕಾಲಕ್ಕೆ ಮೇಲೆ ತೋರಿಸಿದ ದ್ವಿಚಕ್ರ ವಾಹನಕ್ಕೂ ಅಪಘಾತವಾಗಿರುತ್ತದೆ ಎಂದರೆ ಸಾಕ್ಷಿ ಸದ್ರಿ ವಾಹನವನ್ನು ನಾನು ನೋಡಿಲ್ಲ ಎಂದು ನುಡಿದಿರುತ್ತಾರೆ. ಸದ್ರಿ ದ್ವಿಚಕ್ರ ವಾಹನದ ಹಿಂಬದಿ ಸವಾರರಿಗೆ ಗಾಯವಾಗಿರುತ್ತದೆ ಎಂದರೆ ನನಗೆ ತಿಳಿದಿಲ್ಲ. ಆರೋಪಿ ಮೊದಲಿನಿಂದ ನಮ್ಮ ಮಸೀದಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಇದೇ ವಿಚಾರವಾಗಿ ದಿನಾಂಕ 24.04.2019 ರಂದು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ.11 ಎಂದು ಗುರುತಿಸಲಾಯಿತು. ಮೇಲೆ ಹೇಳಿದ ರೀತಿಯಲ್ಲಿ ಯಾವುದೇ ಲಾರಿ ನಮ್ಮ ವಾಹನದ ಎದುರುಗಡೆ ಬಂದಿರದೇ ಇದ್ದರೂ ಆರೋಪಿಯ ತಪ್ಪನ್ನು ಮರೆಮಾಚಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ವಾಟೀ ಸವಾಲುಃ ಆರೋಪಿತರ ಪರ ವಕೀಲರು ವಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ . ದಂ. ಕುಂದಾಪುರ**